ಓ.ಎಸ್. ನಂ. 62/2018
ಪಿ.ಡಬ್ಲ್ಯೂ- 2

(ಇಂದು ದಿಃ 27-07-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)

ಪಾಟೀ ಸವಾಲು :- ಶ್ರೀ ಎಂ ಜಿ ವಕೀಲರಿಂದ :-

ನಾನು ಮುಂಚೆ ವಕೀಲ ವೃತ್ತಿ ಮಾಡುತ್ತಿದ್ದೆ ಎಂದರೆ ಸರಿ. ಈಗ ವಾದಿ ಕಂಪನಿಯಲ್ಲಿ ನೌಕರನಾಗಿದ್ದೇನೆ. ಮುಂಚೆ ಆಶಪ್ಪ ಸಣ್ಣಮನಿ ವಕೀಲರು ವಾದಿ ಕಂಪನಿಯ ಸಲಹೆಗಾರರಾಗಿದ್ದರು ಎಂದರೆ ಸರಿ. ವಾದಿ ಕಂಪನಿಗೆ ಜಮಿನು ಖರೀದಿ ಮಾಡುವಾಗ ಆಶಪ್ಪ ಸಣ್ಣಮನಿ ವಕೀಲರು ಸಲಹೆಗಾರರಾಗಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ಆಗ ನಾನು ಕೂಡ 2008 ರಿಂದ 2012 ರವರೆಗೆ ಕಾನೂನು ಸಲಹೆಗಾರನಾಗಿದ್ದೆ ಎಂದು ಹೇಳುತ್ತಾರೆ. ವಾದಿ ಕಂಪನಿ ಸಿಮೆಂಟ್ ಸಂಬಂದ ಪಟ್ಟಂತೆ ಕೈಗಾರಿಕಾ ಉತ್ಪಾದನೆ ಮತ್ತು ಇತರ ಸಂಬಂದಿಸಿದ ವ್ಯವಹಾರ ಮಾಡುತ್ತಾರೆ ಎಂದರೆ ಸರಿ. ದಾವಾ ಜಮಿನು ಮತ್ತು ಸೇಡಂ ತಾಲ್ಲೂಕಿನಲ್ಲಿನ ಇತರ ಜಮಿನುಗಳನ್ನು ವಾದಿ ಕಂಪನಿಯವರು ಸಿಮೆಂಟ ಉತ್ಪಾದನೆ ಮತ್ತು ಕೈಗಾರಿಕಾ ಉದ್ದೇಶಕ್ಕೆ ಕ್ರಯಕ್ಕೆ ಪಡೆದುಕೊಂಡಿದ್ದಾರೆ ಎಂದರೆ ಸರಿ. ನಾವು ಕೈಗಾರಿಕಾ ಉದ್ದೇಶಕ್ಕೆ ಎಂದು ಹೇಳಿ ಸದರಿ ಜಮಿನುಗಳನ್ನು ಕ್ರಯಕ್ಕೆ ಪಡೆದುಕೊಂಡಿದ್ದೇವೆ ಖರೀದಿ ಮಾಡುವಾಗ ಖರೀದಿ ಉದ್ದೇಶಕ್ಕೆ ಎಂದು ಮುಂದ್ರಾಂಕ ಶುಲ್ಕ ಕಟ್ಟಿದ್ದೀರಾ ಎಂದರೆ ಹೌದು ಎಂದು ಹೇಳುತ್ತಾರೆ. ನಾವು ವಾಣಿಜ್ಯ ಉದ್ದೇಶಕ್ಕೆ ಮತ್ತು ಕೈಗಾರಿಕಾ ಉದ್ದೇಶಕ್ಕೆ ನಿಗದಿ ಆಗಿರುವ ಮುಂದ್ರಾಂಕ ಶುಲ್ಕ ಪಾವತಿ ಮಾಡಿಲ್ಲ ಎಂದರೆ ಸರಿಯಲ್ಲ. ಇದರಿಂದಾಗಿ ಸರಕಾರದ ಬೊಕ್ಕಸಕ್ಕೆ ವಾದಿ ಕಂಪನಿಯವರು ನೂರಾರು ಕೋಟಿ ನಷ್ಟ ಉಂಟು ಮಾಡಿದ್ದಾರೆ ಎಂದರೆ ಸರಿಯಲ್ಲ.

ಅಗ್ರಿಮೆಂಟ್ ಆದಾಗ ಪಹಣಿ ಪತ್ರಿಕೆಯಲ್ಲಿ ಸರ್ವೆ ನಂ. 63 ರಲ್ಲಿ 19 ಎಕರೆ 19 ಗುಂಟೆ ಪೈಕಿ ಮಹದೇವಮ್ಮರವರ ಹೆಸರಿನಲ್ಲಿ 4 ಎಕರೆ 19 ಗುಂಟೆ 2 ನೇ ಪ್ರತಿವಾದಿ ಹೆಸರಿನಲ್ಲಿ 5 ಎಕರೆ, ಧರ್ಮರಾಯ ಹೆಸರಿನಲ್ಲಿ 5 ಎಕರೆ ಮತ್ತು ನಾಗೇಂದ್ರಪ್ಪ ಹೆಸರಿನಲ್ಲಿ 5 ಎಕರೆ ಇತ್ತು. ನಾವು ಮಹದೇವಮ್ಮನ ಸೊಸೆ 1 ನೇ ಪ್ರತಿವಾದಿ ಮತ್ತು 2 ನೇ ಪ್ರತಿವಾದಿಯಿಂದ ದಾವಾ ಜಮಿನಿಗೆ ಸಂಬಂದಪಟ್ಟಂತೆ ಅಗ್ರಿಮೆಂಟ್ ಮಾಡಿಕೊಂಡಿದ್ದೇವೆ. ಆ ಸಮಯದಲ್ಲಿ ಮಹದೇವಮ್ಮ ತೀರಿಹೋಗಿದ್ದರು. ಅವರ ವಾರಸುದಾರರು ಎಂದು ಕಾಂತಾಬಾಯಿ ಅಗ್ರಿಮೆಂಟ್

ಬರೆದುಕೊಟ್ಟಿದ್ದಾರೆ. ಮಹದೇವಮ್ಮರವರಿಗೆ ಕಲ್ಯಾಣಪ್ಪ, ನಾಗೇಂದ್ರಪ್ಪ, ಧರ್ಮರಾವ್ ವಾರಸುದಾರರಾಗಿದ್ದರು. ಆ ಕಾಲಕ್ಕೆ ಕಲ್ಯಾಣಪ್ಪ ಮತ್ತ ಧರ್ಮರಾವ್ ತೀರಿಹೊಗಿದ್ದರು. ನಾಗೇಂದ್ರಪ್ಪ ಬದುಕಿದ್ದರು. ಕಲ್ಯಾಣಪ್ಪ ಮತ್ತು ಧರ್ಮರಾವ್‌ರವರ ವಾರಸುದಾರರ ಬಗ್ಗೆ ತಿಳಿದುಕೊಂಡಿದ್ದೆವು. ಅವರು ಅಗ್ರಿಮೆಂಟಿಗೆ ಸಹಿ ಮಾಡಿಲ್ಲ. ಅವರಿಂದ ಒಪ್ಪಿಗೆ ಕೂಡ ಪಡೆದುಕೊಂಡಿಲ್ಲ. ಸಾಕ್ಷಿ ಮುಂದುವರೆದು 1 ಮತ್ತು 2 ನೇ ಪ್ರತಿವಾದಿಯರು ಜಮಿನು ನಮ್ಮ ಭಾಗಕ್ಕೆ ಬಂದಿದೆ ಎಂದು ಹೇಳಿದ ಮೇರೆಗೆ ಅವರಿಂದ ಅಗ್ರಿಮೆಂಟ್ ಮಾಡಿಸಿಕೊಂಡಿದ್ದೇವೆ. ಅವರ ಭಾಗಕ್ಕೆ ಬಂದಿದೆ ಎಂದು ತೋರಿಸಲು ಅವರು ನಮಗೆ ಯಾವುದೇ ದಾಖಲಾತಿ ಕೊಟ್ಟಿಲ್ಲ, ಆದರೆ ಪಹಣಿಯಲ್ಲಿ ಅವರ ಹೆಸರಿಗೆ ಬಂದಿತ್ತು ಎಂದು ಹೇಳತ್ತಾರೆ. ನಾಗೇಂದ್ರಪ್ಪರವರ ಸಹಿಯನ್ನು ಒಪ್ಪಿಗೆ ಸಾಕ್ಷಿದಾರ ಎಂದು ಪಡೆದುಕೊಂಡಿದ್ದೇವೆ. ನಾಗೇಂದ್ರಪ್ಪ ದಾವಾ ಜಮಿನು ಅವರ ಅಣ್ಣ ಕಲ್ಯಾಣಪ್ಪನ ಭಾಗಕ್ಕೆ ಬಂದಿತ್ತು ಎಂದು ಹೇಳಿದ ಮೇರೆಗೆ ಉಳಿದವರ ಸಹಿ ಪಡೆದಿಲ್ಲ, ಆತನ ಸಹಿ ಮಾತ್ರ ಪಡೆದುಕೊಂಡಿದ್ದೇವೆ.

ಅಗ್ರಿಮೆಂಟ್ ಮಾಡುವಾಗ ಪಹಣಿಯಲ್ಲಿ 1 ನೇ ಪ್ರತಿವಾದಿ ಹೆಸರು ಇರಲಿಲ್ಲ, ಅವರ ಅತ್ತೆ ಮೃತ ಮಹದೇವಮ್ಮ ಮತ್ತು 2 ನೇ ಪ್ರತಿವಾದಿಯ ಹೆಸರು ಇತ್ತು. ದಾವಾ ಸ್ವತ್ತಿನಲ್ಲಿ ತನಗೂ ಭಾಗ ಇದೆ ಎಂದು ನಾಗೇಂದ್ರಪ್ಪ ಕಂದಾಯ ನ್ಯಾಯಾಲಯದಲ್ಲಿ ತಕರಾರು ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ.

(ಪ್ರತಿವಾದಿ ಪರ ವಕೀಲರ ವಿನಂತಿ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಸೇಡಂ.